# ಗೊಂಬೆಯಾಟವಯ್ಯಾ?




ಎಲ್ಲಿ ಹೋದ ಆ ಚೋಟುದ್ದ ಹುಡುಗ
ಚೂಪಾದ ಕಲ್ಲಿಂದ ಮರದಲ್ಲಿ ಗೊಂಬೆ ಕೆತ್ತುತ್ತಿದ್ದ
ಕಣ್ಣು, ಮೂಗು ಕೆತ್ತುವಷ್ಟರಲ್ಲಿ ಅಪ್ಪನ ಕರೆ ಕೇಳಿ ಓಡಿದ
ಒಣಗಿದ ಮೇಲೆ ಮೂಡಿದ ಆಕೃತಿ ಕಂಡು
ದಾರಿಹೋಕ 'ತಾಯೀ ಶರಣು' ಎಂದು ಅಡ್ಡಬಿದ್ದ

ಅರಿಸಿನ, ಕುಂಕುಮ ಲೇಪನ ಮಾಡಿ
ದಾರದಿಂದ ಆಚೀಚೆ ಬಳೆಗಳ ಕಟ್ಟಿ
ಕುತ್ತಿಗೆಗೆ ತಾಳಿಸರವನು ಪೋಣಿಸಿ
ಶಕ್ತಿದೇವತೆಯ ಹೊಸ ಹೆಸರನು ನೀಡಿ
ಹೊಸವೇಷದಲಿ ಭೂತ, ಭವಿಷ್ಯ ಹೇಳುವವನಾಗಿ ಕುಳಿತ

ಮತ್ತೆ ಬಂದ ಹುಡುಗ ಗೊಂಬೆ ಕೆತ್ತನೆ ನೆನಪಾಗಿ ಬಂದರೆ–
ಮರದ ಸುತ್ತ ಕೈಮುಗಿದು, ಸುತ್ತುವ ಜನ
ಕುಳಿತ ವ್ಯಕ್ತಿಯ ಕಾಲಿಗೆ ಎರಗುವ ಮೂಢತನ
ಇನ್ನು ಇವನಿಗೆ ಆ ಮರದ ಜೊತೆ ಆಡುವ ಹಕ್ಕಿಲ್ಲ
ಗೊಂಬೆ ಕೆತ್ತಿದ ತಪ್ಪಿಗೆ, ನೋಡುತ ಕುಳಿತ ತೆಪ್ಪಗೆ

● **ನಳಿನಿ ಟಿ. ಭೀಮಪ್ಪ**

# ಬಿಡಿ ನೆನಪಿನ ದ್ರವ್ಯ



ನಿನ್ನ ನೆನಪಿನ ದ್ರವ್ಯಗಳನ್ನು ತೊಟ್ಟು
ಇನ್ಯಾರದೊ ಕಣ್ಣಿನ ಶೃಂಗಾರವಾಗಲಾರೆನು
ನಿನ್ನ ರಕ್ತದ ಒಕುಳಿ ದೇಶಕ್ಕೆ
ಕೊನೆವರೆಗೆ ಸಾಕು ನನಗೆ
ನಿನ್ನ ಹೆಸರಿನ ಉಸಿರು

ಇದೋ ಇದು ಅರ್ಪಣೆ ಹಣೆಯ
ಅರಸಿನ ಕುಂಕುಮ ಚಂದನ
ಹಸಿರು ಬಲೆಗಳ ಕಿಂಕಿಣಿ
ಕರಿಮಣಿಯ ಮೃದು ದನಿ
ಪ್ರಕೃತಿಯ ಹಸಿರು ಗಣಿಗೆ

ಕನ್ನಡಿಯನ್ನು ಮರೆಮಾಚಿದ್ದೇನೆ
ನಿನ್ನ ಶೃಂಗಾರ ನೋಡಿ ನಾನು
ದಿನೆ ದಿನೇ ತಾಯಿಯಾಗುತ್ತಿದ್ದೇನೆ

● **ಹೇಮಾ ಸದಾನಂದ್ ಅಮೀನ್**